ತೂರಿಕೊಂಡಿತು ಅನಿಸುತ್ತದೆ. ಒಂದು ಬಗೆಯ ಗಂಭೀರ ತೊಡಗುವಿಕೆ, ಅವಿರತದ ತೊಡಗುವಿಕೆ ಜೊತೆಗೂಡಿ ಬದುಕಿನಲ್ಲಿ ಏನೋ ಒಂದಿಷ್ಟು ಸಾಧನೆಗಿಳಿದಂತಾಗಿದೆ. ಸೃಜನಶೀಲ ತೊಡಗುವಿಕೆ, ಜೊತೆಗೇ ಅಧ್ಯಯನ – ಇವೆರಡೂ ನನ್ನೊಳಗಿನ ಅವಿರತದ ಆಕಾಂಕ್ಷೆಗಳು ಅನ್ನಿಸಿದೆ. ಹೀಗೆ ತೊಡಗಿಕೊಳ್ಳುತ್ತಲೇ ನಾನು ಕಂಡುಕೊಂಡಿರುವುದು ಅದು ಅಂದರೆ ತಪ್ಪಿಲ್ಲ. ಬಾಲಲೋಕದ ಅನುಭವ ಜಗತ್ತು ನಿಜಕ್ಕೂ ಒಂದು ಅಪರೂಪದ್ದು ಅಂತ ನನಗೆ ಅನಿಸಿದೆ. ಅದು ನನ್ನ ಈ ಇಳಿ ವಯಸ್ಸಿನಲ್ಲಿ ಒಂದಿಷ್ಟು ನಿರುಮ್ಮಳತೆಯನ್ನ, ತೃಪ್ತಿಯನ್ನ ನೀಡಿದೆ ಎಂದರೆ ತಪ್ಪಿಲ್ಲ.

ಏನಿಲ್ಲವೆಂದರೂ ಮೂವತ್ತೈದು ವರ್ಷದಾಟಿ ಬಂದಿರುವ ನನ್ನ ಈ ತೊಡಗುವಿಕೆ ನಮ್ಮ ಸಾಹಿತ್ಯ ವಲಯದಲ್ಲಿ ಯಾರನ್ನೂ ಅಷ್ಟಾಗಿ ಸೆಳೆಯದೆ ಹೋದದ್ದು ಬೇಸರವನ್ನು ತಂದುದಿದೆ. ವಿರಳವಾಗಿ ನನ್ನ ಹತ್ತಿರದ ಸ್ನೇಹಿತರೇ ನನ್ನ ಜೊತೆಯಾದವರು. ಕನ್ನಡದಾಚೆ ಬೇರೆ ಭಾಷಿಕರೇ, ಭಾರತದಾಚೆ ಇಂಗ್ಲಿಷಿನವರು ನನ್ನ ಪ್ರಯತ್ನವನ್ನು ಗಮನಿಸುತ್ತ ಬಂದುದೇ ನನಗೆ ಒಂದಿಷ್ಟು ಭರವಸೆಯನ್ನು ನೀಡಿದುದು. ನಮ್ಮ ಸಾಹಿತ್ಯಿಕ ವಾತಾವರಣವೇ ಹೀಗಿರುವುದರಿಂದ ನನ್ನಂಥವರು ಈ ಒಂಟಿತನವನ್ನು ಅನುಭವಿಸುವುದು ಅನಿವಾರ್ಯವೂ ಅನ್ನಿಸಿಬಿಟ್ಟಿದೆ. ಎಲ್ಲಾ ಭಾಷಾವಲಯಗಳಲ್ಲೂ ಇದು ಹೀಗೆಯೇ ಇದೆ. ಹಿಂದಿ ಭಾಷೆ ಇರುವ ಪ್ರದೇಶ ಹಲವಾರು ರಾಜ್ಯಗಳಲ್ಲಿ ಹರಡಿಕೊಂಡು ವಿಶಾಲವಾಗಿರುವುದರಿಂದ ಮಕ್ಕಳ ಸಾಹಿತ್ಯಾಸಕ್ತರ ಸಂಖ್ಯೆ ದೊಡ್ಡದಾಗಿದೆ. ಅವರು ತಮ್ಮದೇ ಪ್ರತ್ಯೇಕತೆಯನ್ನು ಮಾಡಿಕೊಳ್ಳಲು ಅನುಕೂಲವಾಗಿಬಿಟ್ಟಿದೆ. ಭಾರತೀಯ ಇಂಗ್ಲೀಷ್ ಲೇಖಕರು ಯಾವ ಗೊಡವೆಯೂ ಇಲ್ಲದೆ ತಮ್ಮದೇ ವಲಯ ಕಟ್ಟಿಕೊಂಡಿದ್ದಾರೆ. ಅವರ ಮುಖ ಆದಷ್ಟೂ ಅಂದವಾದ, ಮಾರುಕಟ್ಟೆಯ ಆಕಾಂಕ್ಷೆಯ ಪುಸ್ತಕಗಳ ಕಡೆಗೆ. ಭಾರತೀಯ ಉಳಿದ ಭಾಷೆಗಳನ್ನು ಸಂಪರ್ಕದಲ್ಲಿರಿಸಿಕೊಳ್ಳಲು ಸಾಕಷ್ಟು ಪ್ರಯತ್ನ ಮಾಡಿ ಸೋತಿದ್ದೇನೆ. ಅನೇಕರಿಗೆ ನನ್ನ ಪತ್ರಿಕೆಯ ವಿಷಯ ಗೊತ್ತು, ಆದರೆ ಅವರ ಕಡೆಯಿಂದ ಯಾವ ಉತ್ತೇಜಕ ಪ್ರತಿಕ್ರಿಯೆಯೂ ಕಂಡಿಲ್ಲ. ದೆಹಲಿ, ಮುಂಬೈ, ಲಖನೌ ಮುಂತಾದ ಕಡೆಗಳ ಅನೇಕ ಹಿರಿಯ ಲೇಖಕರು ಕೆಲವರಾದರೂ ಪ್ರೀತಿಯಿಂದ ಸ್ಪಂದಿಸುತ್ತಿರುವುದು ತುಸು ಖುಷಿ ನೀಡಿದೆ. ಸ್ವಂತ ಸುಖಾಯ ಅನ್ನುವ ಈ ನಡೆ ನನಗೆ ಒಂದಿಷ್ಟು ಖುಷಿ, ಸಂತಸವನ್ನ ಬದುಕಿಗೆ ಜೋಡಿಸಿದೆ.

**◆ ಸೃಜನಶೀಲ ಬರವಣಿಗೆಯಲ್ಲಿ ತೊಡಗುವುದರ ಜೊತೆಗೆ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದ ಅಧ್ಯಯನ ಹಾಗೂ ವಿಮರ್ಶೆಯಲ್ಲಿಯೂ ಸಕ್ರಿಯರಾಗಿದ್ದೀರಿ. ಕನ್ನಡ ಮತ್ತು ಇಂಗ್ಲಿಷಿನಲ್ಲಿ ಮಕ್ಕಳ ಸಾಹಿತ್ಯದ ಅಧ್ಯಯನ, ವಿಮರ್ಶೆ ಒಳಗೊಂಡಂತೆ ಪ್ರತ್ಯೇಕ ಸಾಹಿತ್ಯ ಪತ್ರಿಕೆಗಳನ್ನು ದೀರ್ಘ ಕಾಲದಿಂದ ನಡೆಸಿಕೊಂಡು ಬರುತ್ತಿದ್ದೀರಿ. ಇದೆಲ್ಲ ಹೇಗೆ ಸಾಧ್ಯವಾಯಿತು?**

ಪತ್ರಿಕೆಯಂಥ ಚಟುವಟಿಕೆ ಹೂಡಿಕೊಳ್ಳುವುದು ಅಷ್ಟು ಸುಲಭದ ಸಂಗತಿಯಲ್ಲ. ಅದು ಬಹುಶಃ ನನ್ನೊಳಗಿನ ಸಂಶೋಧನೆಯ, ಅಧ್ಯಯನದ ಬಚ್ಚಿಟ್ಟುಕೊಂಡಿದ್ದ ಬಯಕೆಯಿಂದಲೇ ದಾರಿಮಾಡಿಕೊಂಡುದು. ಪ್ರಾರಂಭದ ದಿನಗಳಲ್ಲೇ ಪತ್ರಿಕೆಯ ಪ್ರಯತ್ನ ಶುರು ಹಚ್ಚಿಕೊಂಡುದು ಈ ಬಗೆಯ ತೀವ್ರತೆಯನ್ನ ಹೇಳುತ್ತದೆ. ಮೊದಲ ಸಂಚಿಕೆಯಲ್ಲೇ 'ವಯಸ್ಕರಾದವರು ಮಕ್ಕಳ ಸಾಹಿತ್ಯ ಅಂತ ಅನ್ನುವುದನ್ನು ಯಾಕೆ ಬರೆಯಲು ಮನಸ್ಸು ಮಾಡುತ್ತಾರೆ?' ಎನ್ನುವ ಪ್ರಶ್ನೆಯನ್ನು ಮುಂದಿರಿಸಿಕೊಂಡಿದ್ದೆ. ಈಗ ನನಗೆ ಹೊರದೇಶಗಳಿಂದಲೇ ಈ ಪ್ರಶ್ನೆಗೆ ಸ್ಪಂದಿಸುವ ಅನೇಕ ವಿದ್ವಾಂಸರ ಮಾತುಗಳು ಜೊತೆಯಾಗುತ್ತ ಬಂದಿವೆ. ಕನ್ನಡ ಯಾವತ್ತೂ ಇಂಥ ದ್ವಂದ್ವದ ಪ್ರಶ್ನೆಯನ್ನು ಕೇಳಿರಲಿಲ್ಲ. ಮಕ್ಕಳಿಗಾಗಿ ಒಂದಿಷ್ಟು ಸಾಹಿತ್ಯ ಸೃಷ್ಟಿಸುವುದು ಎನ್ನುವ ಸರಳ ಸಮೀಕರಣವನ್ನೇ ನೆಮ್ಮಿಕೊಂಡುದು ನಮ್ಮಲ್ಲಿ. ಮಕ್ಕಳ ಸಾಹಿತ್ಯದ ಈ ರಂಗದಲ್ಲಿ ಅಧ್ಯಯನಕ್ಕಿಳಿಯುವವರು, ವಿಮರ್ಶೆಗಿಳಿಯುವವರು ಸಿಗುವುದೇ ಅಪರೂಪ. ನಾನು ತುಂಬಾ ಪ್ರಯತ್ನಪಟ್ಟು ನಿರಾಸೆ ಅನುಭವಿಸಿ, ಕಡೆಗೆ ಏಕವ್ಯಕ್ತಿ ಸಾಹಸಕ್ಕೆ ಅನಿವಾರ್ಯವಾಗಿ ಇಳಿದುದಾಯಿತು. ಜೊತೆಗೆ, ನನ್ನಂಥ ಕನ್ನಡ ಮಾಧ್ಯಮದಲ್ಲೇ ಬಂದವನಿಗೆ ಬಲು ದೂರವಾದ ಇಂಗ್ಲೀಷಿನಂಥ ಭಾಷೆಯ ಅನಿವಾರ್ಯತೆಯೂ ಕಾಡಿತು. ನನಗೆ ಹೆಚ್ಚು ವಿಸ್ತಾರಕ್ಕೆ ತೆರೆದುಕೊಳ್ಳುವ,